ಉಪಹಾರ ಗೃಹಗಳು :

01. ಮಯೂರ ವನಶ್ರೀ, ಬನ್ನೇರುಘಟ್ಟ,
02. ಮಯೂರ ನಿಸರ್ಗ, ಮುತ್ಯಾಲಮಡುವು
03. ಮಯೂರ ಹೈವೇ ಉಪಹಾರಗೃಹ, ಮದ್ದೂರು
04. ಮಯೂರ ಬಾಲಭವನ ಕಿಯಾಸ್, ಬೆಂಗಳೂರು

ದೋಣಿ ವಿಹಾರ ಕೇಂದ್ರಗಳು :

01. ಮಯೂರ ಸ್ಯಾಂಕಿ ದೋಣಿ ವಿಹಾರ, ಬೆಂಗಳೂರು
02. ಮಯೂರ ಕೆ.ಆರ್. ಸಾಗರ ದೋಣಿ ವಿಹಾರ, ಕೆ.ಆರ್. ಸಾಗರ.

ಹೊರ ರಾಜ್ಯದಲ್ಲಿ:

01. ಊಟಿ
02. ತಿರುಮಲ

ಕೇಂದ್ರ ರಸ್ತೆ ನಿಧಿಯಲ್ಲಿ ತೆಗೆದುಕೊಂಡ ಕಾಮಗಾರಿಗಳು

62 (200) ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ (ಬೈಲಹೊಂಗಲ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಕೇಂದ್ರ ಸರ್ಕಾರದ ರಸ್ತೆ ನಿಧಿಯಲ್ಲಿ ಯಾವ ಯಾವ ಮತಕ್ಷೇತ್ರಗಳಲ್ಲಿ ಎಷ್ಟು ಮೊತ್ತದ ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ; ಮತಕ್ಷೇತ್ರವಾರು ವಿವರ ನೀಡುವುದು; ಪ್ರತಿ ವರ್ಷ ತೆಗೆದುಕೊಂಡ ಕೆಲಸದ ವಿವರ ನೀಡುವುದು;

ಆ) ಬೈಲಹೊಂಗಲ ಮತಕ್ಷೇತ್ರದಲ್ಲಿ ಕಳೆದ 3 ವರ್ಷಗಳಲ್ಲಿ ಯಾವ ಯಾವ ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ; ಎಷ್ಟು ಮೊತ್ತಕ್ಕೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿದೆ; ಆ ಕೆಲಸಗಳು ಯಾವ ಹಂತದಲ್ಲಿವೆ;

ಇ) ಕಳೆದ 3 ವರ್ಷಗಳಲ್ಲಿ ಬೈಲಹೊಂಗಲ ಮತಕ್ಷೇತ್ರದಲ್ಲಿ ಸಿ.ಆರ್.ಎಫ್.ದಲ್ಲಿ ಯಾವುದೇ ಕೆಲಸಗಳನ್ನು ತೆಗೆದುಕೊಂಡಿಲ್ಲವೆಂಬ ಸಂಗತಿ ನಿಜವೇ;

ಈ) ಬೈಲಹೊಂಗಲ ಮತಕ್ಷೇತ್ರದ ವಿಧಾನ ಸಭೆ ಪ್ರತಿನಿಧಿ ಒಬ್ಬ ವಿರೋಧ ಪಕ್ಷದ ಪ್ರತಿನಿಧಿ ಇರುವುದರಿಂದ ಸಿಆರ್ಎಫ್ ದ ಕೆಲಸಗಳು ಕಳೆದ 3 ವರ್ಷಗಳಿಂದ ತೆಗೆದುಕೊಂಡಿಲ್ಲವೆಂಬ ಸಂಗತಿ ನಿಜವೇ;

ಉ) ಹಾಗಿದ್ದಲ್ಲಿ, ಬೈಲಹೊಂಗಲ ಮತಕ್ಷೇತ್ರದಲ್ಲಿ ಸಿ.ಆರ್.ಎಫ್. ಫಂಡ್‌ನಲ್ಲಿ ಕೆಲಸ ಯಾವಾಗ ತೆಗೆದುಕೊಳ್ಳಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಅನುಬಂಧ 'ಅ' ಮತ್ತು 'ಆ' ಗಳಲ್ಲಿ ನೀಡಲಾಗಿದೆ.

ಆ) ಕಳೆದ 3 ವರ್ಷಗಳಲ್ಲಿ ಬೈಲಹೊಂಗಲ ಮತಕ್ಷೇತ್ರದಲ್ಲಿ ಯಾವುದೇ ಹೊಸ ಕೆಲಸ ಮಂಜೂರಾಗಿರುವುದಿಲ್ಲ.

ಇ) ಕಳೆದ 3 ವರ್ಷಗಳಲ್ಲಿ ಬೈಲಹೊಂಗಲ ಮತಕ್ಷೇತ್ರದಲ್ಲಿ ಸಿಆರ್ಎಫ್ ನಲ್ಲಿ ಯಾವುದೇ ಹೊಸ ಕೆಲಸ ಮಂಜೂರಾಗಿರುವುದಿಲ್ಲ ಆದರೆ ಜತ್ ಜಂಬೋಟ ರಸ್ತೆ ಕಿಮೀ 150 ರಿಂದ 156 ರವರೆಗೆ (ಕಿತ್ತೂರು ಚೆನ್ನಮ್ಮ ಸಮಾಧಿ ರಸ್ತೆ) ಭಾಗ ಅಭಿವೃದ್ಧಿಪಡಿಸುವ ಕೆಲಸ 1997 ರಲ್ಲಿ ಮಂಜೂರಾಗಿದ್ದು ಕಳೆದ ವರ್ಷದಲ್ಲಿ ಮುಗಿಸಲಾಗಿದೆ.

ಈ) ನಿಜವಲ್ಲ.

ಉ) ಮಂಜೂರಾದ ನಂತರ ತೆಗೆದುಕೊಳ್ಳಲಾಗುವುದು.

ಬೈಲಹೊಂಗಲ ಮತಕ್ಷೇತ್ರದ ಹದಗೆಟ್ಟ ರಸ್ತೆಗಳ ದುರಸ್ತಿ

64 (201) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ಮತಕ್ಷೇತ್ರದ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳಾದ ವಕ್ಕುಂದ, ನನಗುಂಡಿಕೊಪ್ಪ ರಸ್ತೆಗಳು ಸಿಂಗಲ್ ರಸ್ತೆ ಇದ್ದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬೈಲಹೊಂಗಲ ವಯಾ 1, ಅನಿಗೋಳ-ಬೆಳವಡಿ 2, ಬೆಳವಡಿ-ಸುತಗಟ್ಟಿ 3, ಬೆಳವಡಿ-ಸಂಗೊಳ್ಳಿ ರಸ್ತೆಗಳ ಮರು ಡಾಂಬರೀಕರಣ ಯಾವಾಗ ಮಾಡಲಾಯಿತು;

ಇ) ಈ ರಸ್ತೆಗಳ ಮೇಲೆ ಸಕ್ಕರೆ ಕಾರ್ಖಾನೆಗಳಿಗೆ ಹೋಗುವ ವಾಹನಗಳು ಶ್ರೀ ಕ್ಷೇತ್ರ ಯಲ್ಲಮ್ಮನ ಗುಡ್ಡಕ್ಕೆ ಹಾಗೂ ಶ್ರೀ ಕ್ಷೇತ್ರ ಸೊಗಲಕ್ಕೆ ಹೋಗುವ ವಾಹನಗಳು ಸಂಚರಿಸುತ್ತಿರುವ ಸಂಗತಿ ನಿಜವೇ;

ಈ) ಹಾಗಿದ್ದಲ್ಲಿ, ಈ ಹದಗೆಟ್ಟ ರಸ್ತೆಗಳನ್ನು ಕೂಡಲೇ ದುರಸ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದೇ;

ಉ) 1. ಬೈಲಹೊಂಗಲ-ಮಾಟೊಳ್ಳಿ ವಯಾ ಹೊಸೂರು 2, ಬೈಲಹೊಂಗಲ-ಕುಟಿರನಟ್ಟಿ ವಯಾ ಹಲ್ಕಿ ಕ್ರಾಸ್ ಈ ರಸ್ತೆಗಳ ಮರು ಡಾಂಬರೀಕರಣ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಬೈಲಹೊಂಗಲ ತಾಲ್ಲೂಕಿನ ವಕ್ಕುಂದ ಗ್ರಾಮವು ಬೈಲಹೊಂಗಲ ಬುಡರಕಟ್ಟಿ ಜಿಲ್ಲಾ ಮುಖ್ಯ ರಸ್ತೆಯ ಕಿಮಿ 5 ರಲ್ಲಿ ಇದೆ. ಇದು ಮಧ್ಯವರ್ತಿ ಪಥ (5.5 ಮೀಟರ್ಸ್ ಅಗಲ)ದ ರಸ್ತೆಯಾಗಿರುತ್ತದೆ. ನನಗುಂಡಿಕೊಪ್ಪ ಗ್ರಾಮವು ಬೆಳವಡಿ ದೊಡವಾಡ ನನಗುಂಡಿಕೊಪ್ಪ ಜಿಲ್ಲಾ ಮುಖ್ಯ ರಸ್ತೆಯ ಮೇಲೆ ಬರುತ್ತದೆ. ಸದರಿ ಜಿಲ್ಲಾ ಮುಖ್ಯ ರಸ್ತೆ ಉದ್ದಳತೆಯು 0.00 ಮತ್ತು 11.00 ಕಿಮೀ ವರೆಗೆ ಇದೆ. ಈ ಜಿಲ್ಲಾ ಮುಖ್ಯ ರಸ್ತೆಯಲ್ಲಿ 6.30 ಕಿಮೀ ಉದ್ದವು ಏಕ ಪಥ (3.75 ಮೀ ಅಗಲ) ಹಾಗೂ 4.70 ಕಿಮೀ ಉದ್ದವು ಮಧ್ಯಮ ಪಥ (5.5 ಮೀ ಅಗಲ) ಇದ್ದು ಡಾಂಬರೀಕರಣ ಮೇಲ್ಮೈ ಹೊಂದಿರುತ್ತದೆ.

ಆ) 1. ಬೈಲಹೊಂಗಲದಿಂದ ಬೆಳವಡಿ ವಯಾ ಅನಿಗೋಳ ರಸ್ತೆಯು ಜಿಲ್ಲಾ ಮುಖ್ಯ ರಸ್ತೆಯಾಗಿದ್ದು, 15.40 ಕಿಮೀ ಉದ್ದವಿದ್ದು, 5.50 ಮೀ ಅಗಲದ ಮಧ್ಯಮ ಪಥದ ಡಾಂಬರ ಮೇಲ್ಮೈಯುಳ್ಳ ರಸ್ತೆಯಾಗಿದೆ. ಇದರಲ್ಲಿ ಕಿಮೀ 0.00 ದಿಂದ 1.60 ರವರೆಗೆ ಬೈಲಹೊಂಗಲ ಬೈಪಾಸ್ ರಸ್ತೆಗೆ 1997-98 ರಲ್ಲಿ ಶೀಲ್ ಕೋಟ್ ಮಾಡಲಾಗಿದೆ. ಬೈಲಹೊಂಗಲ ಬೆಳವಡಿ ರಸ್ತೆಯಲ್ಲಿ 1.30 ಕಿಮೀ ಉದ್ದಕ್ಕೆ 1996-97ರಲ್ಲಿ ಮರುಡಾಂಬರೀಕರಣ ಮಾಡಲಾಗಿದೆ. ಬಾಕಿ ಉಳಿದ ಭಾಗಕ್ಕೆ ತಗ್ಗುಗುಂಡಿಗಳನ್ನು ತುಂಬಿ ಸುಸ್ಥಿತಿಯಲ್ಲಿಡಲಾಗಿದೆ.

2. ಬೆಳವಡಿ ಸುತಗಟ್ಟಿ ರಸ್ತೆಯ ಸರಿಯಾದ ಹೆಸರು ಸವದತ್ತಿ-ಬೆಳವಡಿ ರಸ್ತೆ ಇದ್ದು, ಜಿಲ್ಲಾ ಮುಖ್ಯ ರಸ್ತೆಯಾಗಿದೆ. ಈ ರಸ್ತೆಯು ಬೈಲಹೊಂಗಲ ತಾಲೂಕಿನಲ್ಲಿ ಕಿಮೀ 15.00 ದಿಂದ 22.60 ರವರೆಗೆ 7.60 ಕಿಮೀ ಉದ್ದವಿರುತ್ತದೆ. ಈ ಭಾಗದ ಕಿಮೀ 20.00ರಲ್ಲಿ 0.84 ಕಿಮೀ ಉದ್ದಕ್ಕೆ 2000-2001 ರಲ್ಲಿ ಮರು ಡಾಂಬರೀಕರಣವನ್ನು ಮಾಡಲಾಗಿದೆ.